## ಮಧ್ಯಂತರ ಅರ್ಜಿ ಸಂಖ್ಯೆ 2ರ ಮೇಲೆ ಆದೇಶ

ಸದರಿ ಮಧ್ಯಂತರ ಅರ್ಜಿ ಸಂಖ್ಯೆ 2ನ್ನು ಅರ್ಜಿದಾರರು ಅಪರಾದ ಪ್ರಕ್ರಿಯಾ ಸಂಹಿತೆಯ ಕಲಂ 125 (2)ರಡಿ ಸಲ್ಲಿಸಿ, ಮೂಲ ಅರ್ಜಿ ಸಲ್ಲಿಸಿದ ದಿನಾಂಕದಿಂದ ಎದುರುದಾರನ ಕಡೆಯಿಂದ ತಮಗೆ ಪ್ರತಿ ತಿಂಗಳು ರೂ.25000/- ಮಧ್ಯಂತರ ಜೀವನಾಂಶವನ್ನು ಈ ಅರ್ಜಿಯ ವಿಲೇವಾರಿ ಆಗುವವರೆಗೆ ನ್ಯಾಯೋಚಿತ ದೃಷ್ಟಿಯಿಂದ ಕೊಡಿಸಿಕೊಡಬೇಕು ಎಂದು ಕೋರಿಕೊಂಡು ಸಲ್ಲಿಸಿರುತ್ತಾರೆ.

2. ಸದರಿ ಮಧ್ಯಂತರ ಅರ್ಜಿಗೆ ಪೂರಕವಾಗಿ ಅರ್ಜಿದಾರ 1 ರವರು ತಮ್ಮ ಪ್ರಮಾಣಪತ್ರ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ಅರ್ಜಿದಾರ 2 ಮತ್ತು 3 ರವರು ತನ್ನ ಮಕ್ಕಳಾಗಬೇಕು ಎದುರುದಾರ ತನ್ನ ಗಂಡನಾಗಬೇಕು, ತಾನು ಎದುರುದಾರನ ವಿರುದ್ಧ ಜೀವನಾಂಶ ಕೋರಿ ಈ ಅರ್ಜಿಯನ್ನು ಸಲ್ಲಿಸಿದ್ದು, ಎದುರುದಾರನು ಕೃಷಿಕ ಮತ್ತು ರಿಯಲ್ ಎಸ್ಟೇಟ್ ಉದ್ಯೋಗ ಮಾಡುತ್ತಿದ್ದು, ಎದುರುದಾರನಿಗೆ 07 ಎಕರೆ ನೀರಾವರಿ ಜಮೀನು ಹಾಗು 04 ಮನೆಗಳಿದ್ದು, ವಾರ್ಷಿಕ 20 ಲಕ್ಷ ಆದಾಯವನ್ನು ಹೊಂದಿದ್ದು, ಎದುರುದಾರನ ಬಳಿ ಕಾರು, ಮೋಟಾರು ಸೈಕಲ್ ಹಾಗೂ ಇತರೆ ವಾಹನಗಳು ಇದ್ದು, ಅವುಗಳನ್ನು ಬಾಡಿಗೆ ಕೊಟ್ಟು ಪ್ರತಿ ತಿಂಗಳು ರೂ.30 ಸಾವಿರ ಹಣವನ್ನು ಪಡೆಯುತ್ತಿದ್ದಾನೆ, ಎದುರುದಾರ ನೀಡಿದ ಮಾನಸಿಕ ಮತ್ತು ದೈಹಿಕ ಹಿಂಸೆಯಿಂದಾಗಿ ತನಗೆ ಅರ್ಜಿದಾರ 2 ಮತ್ತು 3 ರವರನ್ನು ಸಾಕುವ ಸಾಮಾರ್ಥ್ಯ ಇರುವುದಿಲ್ಲ. ತನ್ನ ಪಾಲಕರು ಕಡುಬಡವರಿದ್ದು, ತನಗೆ ಗರ್ಭಪಾತವಾಗಿರುವುದರಿಂದ ತನ್ನನ್ನು ತಾನು ಸಾಕಿಕೊಳ್ಳುವ ಸಾಮಾರ್ಥ್ಯವನ್ನು ಹೊಂದಿರುವುದಿಲ್ಲ. ಈ ಅರ್ಜಿಯ ಅಂತಿಮ ವಿಲೇವಾರಿಗೆ ಸಾಕಷ್ಟು ಸಮಯಾವಕಾಶ ಬೇಕಾಗಿದ್ದು, ಹೀಗಾಗಿ ಎದುರುದಾರನ ಕಡೆಯಿಂದ ಈ ಅರ್ಜಿಯ ಅಂತಿಮ ವಿಲೇವಾರಿ ಆಗುವವರೆಗೆ ಪ್ರತಿ ತಿಂಗಳು ರೂ.25000/- ಮಧ್ಯಂತರ ಜೀವನಾಂಶ ಕೊಡಿಸಿಕೊಡಬೇಕೆಂದು ಕೋರಿಕೊಂಡು ತಮ್ಮ ಪ್ರಮಾಣ ಪತ್ರದಲ್ಲಿ ನಿವೇದಿಸಿಕೊಂಡಿರುತ್ತಾರೆ.

3. ಸದರಿ ಮಧ್ಯಂತರ ಅರ್ಜಿ 2 ಕ್ಕೆ ಎದುರುದಾರನ ಪರ ವಕೀಲರು ತಾವು ಮೂಲ ಅರ್ಜಿಗೆ ಸಲ್ಲಿಸಿರುವ ತಕರಾರನ್ನೇ ಮಧ್ಯಂತರ ಅರ್ಜಿ 2 ಕ್ಕೆ ತಕರಾರು ಎಂದು ಪರಿಗಣಿಸಲು ಕೋರಿಕೊಂಡಿರುತ್ತಾರೆ,

4. ಎದುರುದಾರನು ಸಲ್ಲಿಸಿದ ತಕರಾರಿನ ಸಂಕ್ಷಿಪ್ತ ವಿವರಃ

ಅರ್ಜಿದಾರ 1 ರವರು ತನ್ನ ಹೆಂಡತಿಯಾಗಿರುವುದನ್ನು ಎದುರುದಾರನು ತನ್ನ ತಕರಾರಿನಲ್ಲಿ ಒಪ್ಪಿಕೊಂಡಿರುತ್ತಾನೆ, ಅದರಂತೆ ಅರ್ಜಿದಾರ 2 ಮತ್ತು 3 ರವರು ತನ್ನ ಮಕ್ಕಳಾರುವುದನ್ನು ಸಹ ಎದುರುದಾರನು ತಮ್ಮ ತಕರಾರಿನಲ್ಲಿ ಒಪ್ಪಿಕೊಂಡಿರುತ್ತಾನೆ. ಮುಂದುವರೆದು ಎದುರುದಾರನು ತಮ್ಮ ತಕರಾರಿನಲ್ಲಿ ಅರ್ಜಿದಾರ 1 ರವರು ಬಿಎಡ್ ಪದವಿದಾರರಾಗಿದ್ದು, ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದು, ಅದರಂತೆ ಟ್ಯೂಶನ್ ಹೇಳುತ್ತಿದ್ದು, ಹೀಗಾಗಿ ಅರ್ಜಿದಾರ 1 ರವರು ಸಾಕಷ್ಟು ಅದಾಯವನ್ನು ಹೊಂದಿರುತ್ತಾರೆ. ಅದರಂತೆ ಅರ್ಜಿದಾರ 1 ರವರ ತವರು ಮನೆಯವರು ಆಗರ್ಭ ಶ್ರೀಮಂತರಿದ್ದು, ಅರ್ಜಿದಾರರನ್ನು ನೋಡುವ ಸಾಮಾರ್ಥ್ಯವನ್ನು ಹೊಂದಿರುತ್ತಾರೆ. ಅರ್ಜಿದಾರ 1 ರೊಂದಿಗೆ ತನ್ನ ಮದುವೆ ಆದ ನಂತರ ಅರ್ಜಿದಾರ 1ರವರು ವಿನಾಕಾರಣ ಸಂಶಯ ಪಡುವುದು ಮತ್ತು ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಎದುರುದಾರನಿಗೆ ನೀಡಿರುತ್ತಾರೆ. ಅರ್ಜಿದಾರ 1 ರವರ ಜೊತೆಗೆ ಎದುರುದಾರನು ದಾಂಪತ್ಯ ಜೀವನವನ್ನು ನಡೆಸಲು ಸದಾ ಸಿದ್ದನಿದ್ದರೂ ಸಹ ಅರ್ಜಿದಾರ 1 ರವರು ಎದುರುದಾರನ ಜೊತೆಗೆ ದಾಂಪತ್ಯ ಜೀವನ ಮಾಡದೆ ತನ್ನ ತವರು ಮನೆಯಲ್ಲಿ ವಾಸವಾಗಿರುತ್ತಾರೆ. ಎದುರುದಾರ ಅನೇಕ ಸಲ ಅರ್ಜಿದಾರನ್ನು ಕರೆದುಕೊಂಡು ಬರಲು ಮಾಡಿದ ಪ್ರಯತ್ನ ವಿಫಲವಾಗಿರುತ್ತದೆ, ಅರ್ಜಿದಾರರು ತಮ್ಮ ಅರ್ಜಿಯಲ್ಲಿ ತಿಳಿಸಿರುವ ಎಲ್ಲಾ ಸಂಗತಿಗಳು ನಿಜವಿರುವುದಿಲ್ಲ. ಎದುರುದಾರನು ಫೋರಮೆನ್ ಎಂದು ಗೋಕಾಕ ಫಾಲ್ಸನಲ್ಲಿ ಕೆಲಸ ಮಾಡುತ್ತಿದ್ದು, ದಿನಗೂಲಿ ನೌಕರನಾಗಿದ್ದು, ಕೇವಲ ವಾರದಲ್ಲಿ 2-3 ಕೆಲಸಕ್ಕೆ ಹೋಗಿ ಅದರಿಂದ ಬಂದ ಆದಾಯದಲ್ಲಿ ತನ್ನ ಪಾಲಕರನ್ನು ನೋಡಿಕೊಳ್ಳುವ ಜವಾಬ್ದಾರಿ ಎದುರುದಾರನ ಮೇಲೆ ಇರುತ್ತದೆ. ಎದುರುದಾರನಿಗೆ ವಯಸ್ಸಾದ ತಂದೆ ತಾಯಿಗಳು ಇದ್ದು ಅವರನ್ನು ಸಾಕುವ ಜವಬ್ದಾರಿ ಎದುರುದಾರನ ಮೇಲೆ ಇರುತ್ತದೆ. ಅರ್ಜಿದಾರರು ವಿನಾಕಾರಣ ಎದುರುದಾರನ ವಿರುದ್ಧ ಇದೇ

ನ್ಯಾಯಾಲಯದಲ್ಲಿ ಕ್ರಿಮಿನಲ್.ಮಿಸಿಲೇನಿಯಸ್ ನಂ.505/2022ರಂತೆ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯಲ್ಲಿ ಉಭಯ ಪಕ್ಷಗಾರರು ಹೊಂದಾಣಿಕೆ ಜೀವನ ಮಾಡುವುದಾಗಿ ಒಪ್ಪಿ ರಾಜಿ ಸಂದಾನ ಮಾಡಿಕೊಂಡಿದ್ದು, ತದನಂತರ ಅರ್ಜಿದಾರ 1 ರವರು ಎದುರುದಾರನ ಜೊತೆಗೆ ಕೇವಲ 4-5 ತಿಂಗಳ ಮಾತ್ರ ಜೀವನ ಮಾಡಿ ಪುನಃ ಎದುರುದಾರನಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿ ಹೇಳದೆ ಕೇಳದೆ ತವರು ಮನೆಗೆ ಬಂದು ವಾಸವಾಗಿರುತ್ತಾರೆ. ಹೀಗಾಗಿ ಅರ್ಜಿದಾರರು ವಿಲಾಸಿ ಜೀವನ ಮಾಡುವ ಹವ್ಯಾಸವನ್ನು ಹೊಂದಿದ್ದು, ಎದುರುದಾರನೊಂದಿಗೆ ದಾಂಪತ್ಯ ಜೀವನ ನಡೆಸಲು ಆಸಕ್ತಿ ತೋರಿಸದೆ ತನ್ನ ಇಚ್ಛೆಗನುಗುಣವಾಗಿ ತನ್ನ ತವರು ಮನೆಯಲ್ಲಿಯೇ ಇರುತ್ತಾರೆ. ಹೀಗಾಗಿ ಅರ್ಜಿದಾರರು ಸಲ್ಲಿಸಿರುವ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಲು ಕೋರಿಕೊಂಡಿರುತ್ತಾರೆ.

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು ಹೀಗಾಗಿ ಈ ಮಧ್ಯಂತರ ಅರ್ಜಿಯ ವಿಲೇವಾರಿಗೆ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ಗಮನಕ್ಕೆ ಉದ್ಭವವಾಗಿರುತ್ತವೆ.

ಅಂಶಗಳು

1. ಅರ್ಜಿದಾರರು ತಮ್ಮ ಮಧ್ಯಂತರ ಅರ್ಜಿ ಸಂಖ್ಯೆ 2ರಲ್ಲಿ ಕೇಳಿದಂತೆ ಈ ಅರ್ಜಿ ಸಲ್ಲಿಸಿದ ದಿನಾಂಕದಿಂದ ಮಾಸಿಕ ರೂ.25000/- ಮಧ್ಯಂತರ ಜೀವನಾಂಶ ಪಡೆಯಲು ಅರ್ಹರೇ ?
2. ಯಾವ ಆದೇಶ ?

6. ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸುತ್ತೇನೆ

ಅಂಶ 1: ಭಾಗಶಃ ಸಕಾರಾತ್ಮಕವಾಗಿ

ಅಂಶ 2: ಅಂತಿಮ ಆದೇಶದಂತೆ, ಈ ಕೆಳಕಂಡ

**ಕಾರಣಗಳು**

7. ಅಂಶ 1:- ಅರ್ಜಿದಾರರ ಮತ್ತು ಎದುರುದಾರರ ಸಂಬಂಧ ವಿವಾದದಲ್ಲಿ ಇರುವುದಿಲ್ಲ, ಅರ್ಜಿದಾರ 1 ರವರು ಎದುರುದಾರನ ಹೆಂಡತಿಯಾಗಿದ್ದು, ಅರ್ಜಿದಾರ 2 ಮತ್ತು 3 ರವರು ಅರ್ಜಿದಾರ 1 ಮತ್ತು ಎದುರುದಾರನ ಮಕ್ಕಳಾಗಿರುವ ಕುರಿತು ಯಾವುದೇ ವಿವಾದ ಇರುವುದಿಲ್ಲ.

ಅದರಂತೆ ಅರ್ಜಿದಾರ 2 ಮತ್ತು 3 ರವರು ಗೋಕಾಕಿನ ಫೋಬ್ಸ್ ಶಾಲೆಯಲ್ಲಿ ಓದುತ್ತಿರುವುದು ಕಂಡು ಬರುತ್ತದೆ. ಈಗ ಅರ್ಜಿದಾರ 1 ರವರು ತನ್ನ ಮಕ್ಕಳಾದ ಅರ್ಜಿದಾರ 2 ಮತ್ತು 3 ರವರನ್ನು ಕರೆದುಕೊಂಡು ಎದುರುದಾರನ ಜೊತೆಗೆ ವಾಸವಾಗಿರದೆ ಇರುವುದು ಕಂಡು ಬರುತ್ತದೆ.

8. ಅರ್ಜಿದಾರ 1 ರವರು ಅರ್ಜಿದಾರ 2 ಮತ್ತು 3 ರವರನ್ನು ಈಗ ಸಲಹುತ್ತಿದ್ದು, ಅರ್ಜಿದಾರ 2 ಮತ್ತು 3 ರವರು ವಿದ್ಯಾರ್ಥಿಗಳಾಗಿದ್ದು, ಅರ್ಜಿದಾರ 1ರವರು ಕೆಲಸ ಮಾಡುತ್ತಿದ್ದಾರೆ ಎನ್ನುವ ಕುರಿತು ಎದುರುದಾರನು ಯಾವುದೇ ದಾಖಲೆಗಳನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅರ್ಜಿದಾರ 1 ರಿಂದ 3 ರವರನ್ನು ನೋಡಿಕೊಳ್ಳುವ ಜವಬ್ದಾರಿ ಎದುರುದಾರನ ಮೇಲೆ ಇದ್ದು, ಎದುರುದಾರನು ಇಲ್ಲಿಯವರೆಗೆ ಅರ್ಜಿದಾರ 1 ರಿಂದ 3 ರವರಿಗೆ ಜೀವನಾಂಶಕ್ಕಾಗಿ ಹಣ ನೀಡಿರುವ ಕುರಿತು ಯಾವುದೇ ದಾಖಲೆಗಳನ್ನು ಎದುರುದಾರನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಎದುರುದಾರನು ಕೃಷಿಕನಾಗಿದ್ದು ಜೊತೆಗೆ ರಿಯಲ್ ಎಸ್ಟೇಟ್ ಮತ್ತು ಮರಳಿನ ವ್ಯಾಪಾರ ಮಾಡುತ್ತಿರುವ ಕುರಿತು ಅರ್ಜಿದಾರರು ತಮ್ಮ ಅರ್ಜಿಯಲ್ಲಿ ತಿಳಿಸಿದ್ದು ಹಾಗೇ ಉದ್ಯೋಗ ಮಾಡುತ್ತಿರುವ ಕುರಿತು ಯಾವುದೇ ದಾಖಲೆಗಳನ್ನು ಅರ್ಜಿದಾರರು ಹಾಜರುಪಡಿಸಿರುವುದಿಲ್ಲ. ಎದುರುದಾರನಿಗೆ ಮಾಲದಿನ್ನಿ ಗ್ರಾಮದಲ್ಲಿ ರಿ.ಸ.ನಂ.969, 747, 751, 1043, 747 ಹಾಗೂ ಗೋಕಾಕ ನಗರದ ಮಾಲತೇಶ ನಗರದಲ್ಲಿ ನಿವೇಶನ ಇರುವ ಕುರಿತು ಹಾಗೂ ಗೋಕಾಕ ನಗರದ ಅರಬ ಕಾಲೋನಿಯಲ್ಲಿ ಮನೆ ಇರುವ ಕುರಿತು ಅರ್ಜಿದಾರರು ತಮ್ಮ ಅರ್ಜಿಯ ಜೊತೆಗೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಹೀಗಾಗಿ ಅರ್ಜಿದಾರ 1 ರಿಂದ 3ರವರಿಗೆ ಎದುರುದಾರನ ಕಡೆಯಿಂದ ಮಧ್ಯಂತರ ಜೀವನಾಂಶ ಕೊಡಿಸುವುದು ಸೂಕ್ತವೆಂದು ಈ ನ್ಯಾಯಾಲಯದ ಅಭಿಪ್ರಾಯ ಅರ್ಜಿದಾರರು ತಮ್ಮ ಮಧ್ಯಂತರ ಅರ್ಜಿಯಲ್ಲಿ ಮಾಸಿಕ ರೂ.25ಸಾವಿರ ಮಧ್ಯಂತರ ಜೀವನಾಂಶ ಕೋರಿದ್ದು, ಆದರೆ ಈ ನ್ಯಾಯಾಲಯದ ಅಭಿಪ್ರಾಯದ ಪ್ರಕಾರ ಅರ್ಜಿದಾರ 1 ರವರಿಗೆ ಪ್ರತಿ ತಿಂಗಳು ಮೂಲ ಅರ್ಜಿ ಸಲ್ಲಿಸಿದ ದಿನಾಂಕದಿಂದ ರೂ.3 ಸಾವಿರ ಹಾಗೂ ಅರ್ಜಿದಾರ 2 ಮತ್ತು 3 ರವರಿಗೆ ಪ್ರತಿ ತಿಂಗಳು ತಲಾ ರೂ.1500/- ರಂತೆ ಮಾಸಿಕ ಜೀವನಾಂಶವನ್ನು ಅವರ ಬಟ್ಟೆ ಬರೆ,

ಔಷದೋಪಚಾರ, ಆಹಾರ ವಸತಿ, ಶಿಕ್ಷಣದ ಸಲುವಾಗಿ ಕೊಡಿಸುವುದು ಸೂಕ್ತ ಮತ್ತು ಸಮಂಜಸವೆಂದು ಪರಿಗಣಿಸಿ ಅಂಶ 1ಕ್ಕೆ ಭಾಗಶಃ ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

9. **ಅಂಶ ನಂ.2**:- ಈ ಮೇಲಿನ ಅಂಶ ನಂ.1 ಕ್ಕೆ ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಿರುವುದರಿಂದ, ಈ ಕೆಳಕಂಡಂತೆ

**ಆದೇಶ**

- ಅರ್ಜಿದಾರರು ಅಪರಾಧ ಪ್ರಕ್ರಿಯಾ ಸಂಹಿತೆಯ ಕಲಂ.125(2) ರಡಿ ಸಲ್ಲಿಸಿದ ಮಧ್ಯನತರ ಅರ್ಜಿ ಸಂಖ್ಯೆ 2ನ್ನು ಭಾಗಶಃ ಪುರಸ್ಕರಿಸಲಾಗಿದೆ.
- ಎದುರುದಾರನು ಅರ್ಜಿದಾರ 1 ರವರಿಗೆ ಮೂಲ ಅರ್ಜಿ ಸಲ್ಲಿಸಿದ ದಿನಾಂಕದಿಂದ ಪ್ರತಿ ತಿಂಗಳು ರೂ.3000/- ಹಾಗೂ ಅರ್ಜಿದಾರ 2 ಮತ್ತು 3 ರವರಿಗೆ ಎದುರುದಾರನು ಪ್ರತಿ ತಿಂಗಳು ಮೂಲ ಅರ್ಜಿ ಸಲ್ಲಿಸಿದ ದಿನಾಂಕದಿಂದ ತಲಾ ರೂ.1500/- ರಂತೆ ಮೂಲ ಅರ್ಜಿ ಅಂತಿಮ ವಿಲೇವಾರಿ ಆಗುವವರೆಗೆ ಮಧ್ಯಂತರ ಜೀವನಾಂಶ ಎಂದು ಕೊಡಲು ನಿರ್ದೇಶಿಸಲಾಗಿದೆ.

**(ರಾಜೀವ ಗೋಳಸಾರ)**
**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ಗೋಕಾಕ.**